

ಇಳಿಯಲು ಎದ್ದು ನಿಂತೆವು. ‘ಕೂತ್ಕೊಳಿ ಸರ್, ಮುಂದಿನ ಹಳ್ಳಿಗೆ ಹೋಗಿ ಬಸ್‌ನ ತಿರುಗಿಸಿಕೊಂಡು ಬರಬೇಕು, ಆಮೇಲೆ ಇಳಿಯುವಂತ್ರಿ’ ಅಂದ ನಿರ್ವಾಹಕ. ಕೊನೆಗೆ, ಜೋಗ ಜಲಪಾತದ ಬಳಿಯ ತಂಗುದಾಣದಲ್ಲಿ ಇಳಿದಾಗ ಸಂಜೆ 6.50 ಆಗಿತ್ತು!

ಹೆಂಡತಿ–ಮಕ್ಕಳು ನನ್ನ ಮುಖವನ್ನು ದುರುಗುಟ್ಟಿ ನೋಡತೊಡಗಿದರು. ನೋಡಿಯೂ ನೋಡದಂತೆ ನಾನು ಟಿಕೆಟ್ ಕೌಂಟರ್ ಕಡೆಗೆ ಓಡಿದೆ.

‘ನಾಲ್ಕು ಟಿಕೆಟ್ ಕೊಡಿ’ ಎಂದೆ. ‘ನೋಡಿ ಸರ್, ನೀರು ಸ್ವಲ್ಪವೂ ಕಾಣೋದಿಲ್ಲ. ಒಳಗೆ ಹೋಗಿ ಬಂದ ಮೇಲೆ ನಮಗೆ ಬೈಯುವ ಹಾಗಿಲ್ಲ’ ಎಂದ. ‘ನೀರೇ ಕಾಣಿಸುವುದಿಲ್ಲ ಅಂದರೆ ಒಳಗೆ ಹೋಗಿ ಏನ್ ಮಾಡೋದು’ ಎಂದು ವಾಪಸ್ ಬಂದೆ. ‘ಇಲ್ಲಿಯವರೆಗೂ ಬಂದಿದ್ದೇವೆ. ಒಳಗಡೆ ಹೋಗದಿದ್ದರೆ ಹೇಗೆ? ಇರಲಿ ಟಿಕೆಟ್ ತಗೊಳಿ’ ಎಂದಳು ಹೆಂಡತಿ. ನನ್ನ ಪುಣ್ಯಕ್ಕೆ, ನಮ್ಮ ಹಾಗೆಯೇ ಹಲವರು ಬಂದಿದ್ದರು. ಸರಿ ಎಂದು ಟಿಕೆಟ್ ತೆಗೆದುಕೊಂಡು ಒಳ ಹೋದೆವು.

ಕಗ್ಗತ್ತಲು. ಕಪ್ಪುಮಿಶ್ರಿತ ಹಸಿರಿನ ಮಧ್ಯೆ ಸಣ್ಣ ಬಿಳಿ ಗೆರೆ ಎಳೆದ ಹಾಗೆ ನೀರು ಬೀಳುತ್ತಿತ್ತು. ನಮ್ಮಿಬ್ಬರ ಮೊಬೈಲ್ ಟಾರ್ಚ್ ಆನ್ ಮಾಡಿದೆವು, ಇರುವ ಸಣ್ಣ ಬಿಳಿಗೆರೆಯೂ ಕಾಣದಾಯಿತು! ‘ಎಲ್ಲಿ ಅಪ್ಪ ನೀರು ಒಂಚೂರು ಕಾಣಿಸ್ತಿಲ್ಲ’ ಎಂದು ಕೈ ಜಗ್ಗುತ್ತಾ ಕೇಳುತ್ತಿದ್ದಳು ಮಗಳು. ನಾನೋ, ಶಬ್ದವೇಧಿ ವಿದ್ಯೆ ಬಲ್ಲವನಂತೆ, ನೀರು ಬೀಳುವ ಶಬ್ದವನ್ನ ಆಧರಿಸಿ, ‘ನೋಡು ಮಗಳೇ ಅಲ್ಲಿ ಬೀಳ್ತಿದೆ ನೋಡು, ಶಬ್ದ ಕೇಳಿಸ್ತಿಲ್ವಾ, ಅದೇ ಜೋಗ್ ಫಾಲ್ಸ್’ ಎಂದೆ. ಅನತಿ ದೂರದಲ್ಲಿದ್ದ ಕೆಲವರು, ‘ಹಲೋ ಸರ್, ಅದು ಜೋಗ ಜಲಪಾತ ಅಲ್ಲ. ರಾಜಾ, ರಾಣಿ, ರೋರರ್, ರಾಕೆಟ್ ಇರುವುದು ಇಲ್ಲಿ, ಈ ಕಡೆ ಬನ್ನಿ...’ ಎಂದು ಕೂಗಿದರು. ಕತ್ತಲಲ್ಲಿ ಕಾಣದ ನನ್ನ ಮುಖವನ್ನು ಹೆಂಡತಿ ಮತ್ತೆ ದುರುಗುಟ್ಟಿ ನೋಡಿದಳು!

‘ನಿಮ್ಮಪ್ಪನ ಪ್ಲ್ಯಾನ್ ಅಂದರೆ ಪ್ಲ್ಯಾನು. ಹೆಂಡತಿ–ಮಕ್ಕಳಿಗೆ ತೊಂದರೆ ಕೊಡೋದಕ್ಕೆ ಒಂಚೂರೂ ಇಷ್ಟವಿಲ್ಲ. ಕತ್ತಲಲ್ಲಿ ಜೋಗ ನೋಡಬೇಕು ಅಂತಾನೇ ಹತ್ತು ದಿನಕ್ಕೆ ಮುಂಚೆಯೇ ಟಿಕೆಟ್ ಬುಕ್ ಮಾಡಿದ್ದು ನಿಮ್ಮಪ್ಪ...’ ಗಾಯದ ಮೇಲೆ ಉಪ್ಪು ಸುರಿಯುವಂತೆ ಚುಚ್ಚತೊಡಗಿದಳು ಹೆಂಡತಿ.

‘ಸ್ವಲ್ಪವೂ ನೀರು ಕಾಣಲಿಲ್ವಲ್ರೀ, ದುಡ್ಡು ತೆಗೆದುಕೊಳ್ಳದೆ ಹಾಗೇ ಒಳಗೆ ಬಿಡಬಹುದಿತ್ತು ನೀವು. ಅಲ್ಲದೆ, ಒಳಗಡೆ ಅಲ್ಲಲ್ಲಿ ಲೈಟ್ ಆದರೂ ಹಾಕಿಸಬಾರದಾ?’ ಎಂದು ಟಿಕೆಟ್ ಕೌಂಟರ್‌ನವನ ಮೇಲೆ ರೇಗಿದೆ. ‘ಸರ್, ಒಳಗಡೆ ಬೆಳಕಿನ ವ್ಯವಸ್ಥೆ ಮಾಡಬೇಕು ಎಂದರೆ ಫ್ಲಡ್ ಲೈಟ್ ಅಥವಾ ಹೈ ಇಂಟೆನ್ಸಿಟಿ ಡಿಸ್‌ಚಾರ್ಜ್ ಲೈಟ್‌ಗಳನ್ನ ಬಳಸಬೇಕು. ಆಗ, ಪ್ರಾಣಿ–ಪಕ್ಷಿಗಳಿಗೆ ತೊಂದರೆ ಆಗುತ್ತೆ. ನೀವು ಬೇಗ ಬರದೇ ಇರೋದು ನಿಮ್ಮ ತಪ್ಪು. ನಮ್ಮದಲ್ಲ, ನಾನೇ ಮೊದಲೇ ಹೇಳಿರಲಿಲ್ವ’ ಎಂದು ನನಗೇ ಜೋರು ಮಾಡಿದ.

‘ಯಾಕೋ ನನ್ ಟೈಮೇ ಸರಿ ಇಲ್ಲ’ ಎಂದುಕೊಂಡು ಬಂದೆ. ಜೋಗದ ಬಳಿಯೇ ಉಳಿಯೋಣ ಎಂದರೆ, ಲಗೇಜ್ ಸಾಗರದಲ್ಲಿ ಬಿಟ್ಟು ಬಂದಿದ್ದೆವು. ಅಲ್ಲಿಗೆ ಹೋಗಲೇಬೇಕಿತ್ತು.

ಕೊನೆಯ ಬಸ್ ರಾತ್ರಿ 8ಕ್ಕೆ ಇದೆ ಎಂದು ಖಾಸಗಿ ಬಸ್ ನಿರ್ವಾಹಕ ಹೇಳಿದ್ದ. ಮತ್ತೆ ಆ ಬಸ್ ಕೂಡ ಮಿಸ್ ಆದರೆ, ರಸ್ತೆಯಲ್ಲೇ ಉಳಿಯುವಂತಾದೀತು ಎಂದುಕೊಂಡು ಬಸ್ ನಿಲುಗಡೆ ಸ್ಥಳಕ್ಕೆ 7.20ರ ವೇಳೆಗೆ ಬಂದು ನಿಂತೆವು. ಪಕ್ಕದಲ್ಲಿ ನಿಂತಿದ್ದವರಿಗೆ ವಿಚಾರಿಸಿದಾಗ, ‘7.30ಕ್ಕೆ ಒಂದು ಬಸ್ ಇದೆ ಸರ್’ ಎಂದ. ಟೀ–ಕಾಫಿ ಕುಡಿಯದೇ ಹಾಗೇ ಕಾಯತೊಡಗಿದೆವು. 7.50 ಆದರೂ ಬಸ್ ಬರಲಿಲ್ಲ. ಏನಾದರೂ ತಿನ್ನೋಣ ಎಂದುಕೊಂಡರೆ, ‘8ಕ್ಕೆ ಬಸ್ ಬರುತ್ತಂತೆ, ಈಗ ತಿನ್ನೋಕೆ ಹೋಗಿ ಆ ಬಸ್ ಕೂಡ ತಪ್ಪೋ ಹಾಗೆ ಮಾಡಬೇಡಿ’ ಎಂದು ಗದರಿದಳು ಹೆಂಡತಿ. ನಾನು ಸುಮ್ಮನೆ ನಿಂತೆ!

‘ಡೈಲಿ 8 ಗಂಟೆಗೆ ಕರೆಕ್ಟ್ ಆಗಿ ಬಂದುಬಿಡ್ತಿತ್ತು ಸರ್, ಇವತ್ತೇ ಯಾಕೋ ಲೇಟಾಗಿದೆ’ ಎಂದ ಪಕ್ಕದಲ್ಲಿ ನಿಂತಿದ್ದವ. ಜನರಿಂದ ಭರ್ತಿಯಾಗಿದ್ದ ಬಸ್ 8.20ಕ್ಕೆ ಬಂದರೂ, ನಾವಿದ್ದಲ್ಲಿ ನಿಲ್ಲಲೇ ಇಲ್ಲ! ಕೊನೇ ಬಸ್ ರಾತ್ರಿ 8.45ರ ವೇಳೆಗೆ ಬಂತು. ಸಾಗರ ತಲುಪಿದಾಗ ಸಮಯ ರಾತ್ರಿ 10.15!

ಸಹೋದ್ಯೋಗಿಯ ಗೃಹಪ್ರವೇಶ ಕಾರ್ಯಕ್ರಮಕ್ಕಾಗಿಯೇ ಇತರೆ ಸಹೋದ್ಯೋಗಿ ಸ್ನೇಹಿತರು ಸಾಗರಕ್ಕೆ ಆಗಲೇ ಬಂದಿದ್ದರು. ನಮ್ಮನ್ನು ನೋಡುತ್ತಲೇ, ‘ಹೇಗಿತ್ತು ಪುಟ್ಟಿ ಜೋಗ ಜಲಪಾತ’ ಎಂದು ನನ್ನ ಮಗಳನ್ನು ಕೇಳಿದರು. ಮಗಳು ನನ್ನತ್ತ ನೋಡಿದಳು. ‘ಚೆನ್ನಾಗಿತ್ತು, ಎಲ್ಲರೂ ಹಗಲು ಬೆಳಕಿನಲ್ಲಿ ಜೋಗ ನೋಡೋಕೆ ಹೋಗ್ತಾರೆ, ರಾತ್ರಿ ವೇಳೆ ಹೇಗೆ ಕಾಣಬಹುದು ಎಂಬ ಕುತೂಹಲಕ್ಕೆ ನಾವು ನೈಟ್ ಜೋಗ ನೋಡಿಕೊಂಡು ಬಂದ್ವಿ’ ಎಂದೆ. ಸಹೋದ್ಯೋಗಿಗಳೆಲ್ಲ ಜೋರಾಗಿ ನಕ್ಕರು. ಹೆಂಡತಿ–ಮಕ್ಕಳ ಕಡೆಗೆ ನೋಡೋಕೆ ನನಗೆ ಧೈರ್ಯವೇ ಸಾಲಲಿಲ್ಲ.

ಪ್ರತಿಕ್ರಿಯಿಸಿ: feedback@sudha.co.in